ಮುನ್ನಡೆಯಿಂದ....

# ಸೂಜಿ-ದಾರ

ಗಾರ್ಮೆಂಟ್ಸ್ ಕಾರ್ಮಿಕರ ಸಂಗಾತಿ....

ಸಂಪುಟ : 2 ಸಂಚಿಕೆ : 4 ಪುಟ : 8 ಖಾಸಗಿ ಪ್ರಸಾರಕ್ಕಾಗಿ ಮಾರ್ಚ್ 2008



# ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆ : ಹೊಣೆ ಯಾರದು?

*ಸ್ನೇಹಿತರೇ,*

ರೈತನೊಬ್ಬ ತನ್ನೊಂದಿಗೆ ದಿನವಿಡೀ ದುಡಿಯುವ ಎತ್ತುಗಳ ಯೋಗಕ್ಷೇಮವನ್ನು, ಅದೆಷ್ಟು ಕಾಳಜಿಯಿಂದ ಮಾಡುತ್ತಾನೆಂದರೆ, ಇದಕ್ಕೆ ಅವನಿಗೆ ಯಾವುದೇ ಸಂವಿಧಾನದ ಕಟ್ಟಳೆಯಿಲ್ಲ, ಕಾನೂನು ಇಲ್ಲ. ಕೇವಲ ಮಾನವೀಯತೆ ಹಾಗೂ ನೈತಿಕ ಹೊಣೆ ಹೊತ್ತು ಅವನು ತನ್ನೊಂದಿಗೆ ದುಡಿಯುವ ಆ ಪ್ರಾಣಿಗಳನ್ನು ಪೋಷಿಸುತ್ತಾನೆ.

ಇಂದು ನಗರ ಪ್ರದೇಶಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನಡೆಸಿಕೊಳ್ಳಲಾಗುತ್ತಿದೆ. ಕಾರ್ಮಿಕರ ಆರೋಗ್ಯ ಹಾಗೂ ಸುರಕ್ಷತೆಗಳನ್ನು ನೋಡಿಕೊಳ್ಳಲು ಸಂವಿಧಾನವಿದೆ, ಕಾನೂನಿದೆ, ಅದನ್ನು ಉಲ್ಲಂಘಿಸಿದರೆ ಶಿಕ್ಷಿಸಲು ವ್ಯವಸ್ಥೆಗಳಿವೆ, ಅಧಿಕಾರಿಗಳಿದ್ದಾರೆ. ಆದರೂ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಆರೋಗ್ಯ ಹಾಗೂ ಸುರಕ್ಷತೆ ಇಂದು ಪೂರ್ತಿಯಾಗಿ ಕಡೆಗಣಿಸಲ್ಪಟ್ಟಿದೆ.

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ವಯಸ್ಸು, ಸಾಮಾನ್ಯವಾಗಿ 18 ರಿಂದ 35 ವರ್ಷ. 18 ವರ್ಷಕ್ಕೆ ಕೆಲಸಕ್ಕೆ ಸೇರಿ ಸುಮಾರು 15 ರಿಂದ 20 ವರ್ಷ ದುಡಿಯುವ ಹೊತ್ತಿಗೆ ಅವರ ಶಕ್ತಿ ಸಾಮರ್ಥ್ಯವೆಲ್ಲ ಮುಗಿದಿರುತ್ತದೆ. ನಂತರ ಈ ಕಾರ್ಮಿಕರ ಮುಂದಿನ ಭವಿಷ್ಯವೇನು?

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಮಾಲೀಕರು ಗಮನವನ್ನೇ ಹರಿಸುತ್ತಿಲ್ಲ. ವಿರಾಮವಿಲ್ಲದೆ ದಿನಕ್ಕೆ 8 ರಿಂದ 14 ಗಂಟೆಗಳ ಕಾಲ ಕೆಲಸ, ಧೂಳು, ಅಪಾಯಕಾರಿ ರಾಸಾಯನಿಕಗಳನ್ನು ಹೊಂದಿರುವ ಬಟ್ಟೆಯ ಬಣ್ಣ, ಯಂತ್ರಗಳಿಂದ ಆಗುವ ಸಣ್ಣ ಅಪಘಾತಗಳು, ವಿದ್ಯುತ್ ಅಪಘಾತಗಳು, ಸಮಯಕ್ಕೆ ಸರಿಯಾಗಿ ಊಟವಿಲ್ಲದೆ ಇರುವುದು, 8 ರಿಂದ 14 ಗಂಟೆಯವರೆಗೂ ಸತತವಾಗಿ



ನಿಂತು ಅಥವಾ ಕುಳಿತು ಕೆಲಸ ಮಾಡುವುದು. ಕೆಲಸಕ್ಕೆ ತಕ್ಕಂತಹ ವೇತನವಿಲ್ಲದಿರುವುದರಿಂದ ಪೌಷ್ಟಿಕ ಆಹಾರದ ಕೊರತೆ ಜೊತೆಗೆ ಕಾರ್ಖಾನೆಯಲ್ಲಿ ಆಗುತ್ತಿರುವ ಶೋಷಣೆಗಳು ಇವೆಲ್ಲವುಗಳಿಂದ ಮಹಿಳೆಯರು ಹಲವಾರು ರೀತಿಯ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗು ತ್ತಿದ್ದಾರೆ. ಅಪಘಾತಕ್ಕೀಡಾಗುತ್ತಿದ್ದಾರೆ. ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ.

ಗಾರ್ಮೆಂಟ್ಸ್ ಕಾರ್ಖಾನೆಗೆ ಸುಮಾರು 16ನೆ ವಯಸ್ಸಿನಲ್ಲಿ ಸೇರಿ ಕೊಳ್ಳುವ ಯುವ ಕಾರ್ಮಿಕರು ಎರಡು ವಿಧದಲ್ಲಿ ಕೆಲಸ ನಿರ್ವಹಿಸುತ್ತಾರೆ. ೮ ರಿಂದ 14 ಗಂಟೆಗಳ ವರೆಗೂ ಕುಳಿತೇ ಕೆಲಸ ಮಾಡುವ ಟೈಲರ್‌ಗಳು, ನಿಂತು ಕೆಲಸ ಮಾಡುವ ಚೆಕರ್‌ಗಳು, ಐರನರ್‌ಗಳು, ಟ್ರಿಮರ್‌ಗಳು ಕಟಿಂಗ್ ವಿಭಾಗದಲ್ಲಿ ಕೆಲಸ ಮಾಡುವುದರಿಂದ ಬೆನ್ನು ನೋವು, ಮಂಡಿ ನೋವು ಗಳಿಂದ ಬಳಲುತ್ತಾರೆ.

ಇದರೊಂದಿಗೆ ಅಪಾಯಕಾರಿ ರಾಸಾಯನಿಕಗಳನ್ನು ಒಳಗೊಂಡ ಬಣ್ಣವನ್ನು ಬಟ್ಟೆಗೆ ಹಾಕಿರುವುದರಿಂದ. ಆ ಧೂಳಿನಿಂದ ಉಸಿರಾಟದ ತೊಂದರೆ ಹಾಗೂ ಅಸ್ತಮಾಗಳಿಂದ ಬಳಲುತ್ತಿದ್ದಾರೆ.

ಇತ್ತೀಚಿನ ಗಮನಾರ್ಹ ಸಂಗತಿಯೇನೆಂದರೆ, ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಬಿಡುವಿಲ್ಲದಂತೆ, ಊಟ ಮಾಡಲೂ ಅವಕಾಶವಿಲ್ಲದಂತೆ ಕಾರ್ಮಿಕರು ದುಡಿಯುತ್ತಿರುವುದರಿಂದ ಹಾಗೂ ಪ್ರೊಡಕ್ಷನ್ ಒತ್ತಡಗಳಿಂದ ಹೆಚ್ಚಿನ ಕಾರ್ಮಿಕರು ಟಿ.ಬಿ ಕಾಯಿಲೆಯಿಂದ ಬಳಲುತ್ತಿದ್ದಾರೆ. ಬೆಂಗಳೂರಿನ ರಾಜಾಜಿನಗರದ ಇ.ಎಸ್.ಐ ಆಸ್ಪತ್ರೆಯಲ್ಲಿ ಟಿ.ಬಿ ಕಾಯಿಲೆಯೆಂದು ಬರುವ ಶೇಕಡಾ ೮೫ ಮಹಿಳೆಯರು ಗಾರ್ಮೆಂಟ್ಸ್ ಕಾರ್ಮಿಕರು ಎಂದು ವೈದ್ಯರೊಬ್ಬರು ಹೇಳುತ್ತಾರೆ. ಹೆಚ್ಚು ನೀರು ಕುಡಿದರೆ ಶೌಚಾಲಯಕ್ಕೆ ಪದೇ ಪದೇ ಹೋಗಬೇಕೆಂದು ಕಾರ್ಮಿಕರು ನೀರನ್ನೇ ಕುಡಿಯದೆ ಕೆಲಸ ನಿರ್ವಹಿಸು ತ್ತಿದ್ದಾರೆ. ಇದರಿಂದ ಮೂತ್ರಾಶಯಕ್ಕೆ ಸಂಬಂಧ ಪಟ್ಟ ತೊಂದರೆಗಳೂ, ಮುಟ್ಟಿನ ತೊಂದರೆಗಳನ್ನೂ ಸಹ ಅನುಭವಿಸುತ್ತಿದ್ದಾರೆ.

ಎರಡನೆಯದಾಗಿ ಮಹಿಳಾ ಕಾರ್ಮಿಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಅವಮಾನಿಸುವುದು, ಸಣ್ಣ ಮಕ್ಕಳಿಗೆ ಶಿಕ್ಷೆ ನೀಡುವ ಹಾಗೆ ಗಂಟೆಗಟ್ಟಲೆ ಎಲ್ಲರ ಮುಂದೆ ನಿಲ್ಲಿಸುವುದು, ಹೊರಗೆ ನಿಲ್ಲಿಸುವುದು, ಅವರು ಪ್ರತಿದಿನ ಮಾಡುವ ಕೆಲಸ ನೀಡದೆ ಬೇರೆ ಬೇರೆಯ ಕೆಲಸ ನೀಡುವುದು, ಮತ್ತೊಂದು ಕೆಲಸಕ್ಕೆ ವರ್ಗಾಯಿಸುವುದು, ಇನ್ನೂ ಅನೇಕ ರೀತಿಯಲ್ಲಿ ಸೂಪರ್‌ವೈಸರ್‌ಗಳು, ಫ್ಲೋರ್ ಇನ್‌ಚಾರ್ಜ್‌ಗಳು ಶೋಷಣೆ ನಡೆಸುತ್ತಿದ್ದಾರೆ. ಇದರಿಂದ ಕಾರ್ಮಿಕರು ಅಪಮಾನಕ್ಕೊಳಗಾಗಿ ಆತ್ಮಹತ್ಯೆಯನ್ನೂ ಸಹ ಮಾಡಿಕೊಳ್ಳುತ್ತಿದ್ದಾರೆ. ಕಳೆದ ವರ್ಷ ನಡೆದ 3 ಘಟನೆಗಳನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದು.

ಮೂರನೆಯದಾಗಿ ಕಾರ್ಖಾನೆಯ ಅತಿ ಸಮಯಪಾಲನೆಯಿಂದಾಗಿ ಕಾರ್ಮಿಕರು ಹಲವಾರು ರೀತಿಯ ಅಪಘಾತಗಳಿಗೀಡಾಗುತ್ತಿದ್ದಾರೆ. ಕೆಲವರು ಗಂಭೀರವಾಗಿ ಗಾಯಗೊಂಡರೆ ಕೆಲವರು ಪ್ರಾಣವನ್ನೇ ಕಳೆದುಕೊಳ್ಳು ತ್ತಿದ್ದಾರೆ. ಕಾರ್ಮಿಕರು ತೆಗೆದುಕೊಳ್ಳುವ ಕಡಿಮೆ ಸಂಬಳಕ್ಕೆ ಯಾರೂ ಸಹ ಸರ್ಕಾರಿ ಬಸ್ಸುಗಳನ್ನು ಅವಲಂಬಿಸದೆ ನಡೆದೇ ಹೋಗುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಿಂದ ಕೆಲಸಕ್ಕೆ ಬರುವ ಕಾರ್ಮಿಕರು ಹೆಚ್ಚಾದ ಸಾರಿಗೆ ವೆಚ್ಚವನ್ನು ಭರಿಸಲಾಗದೇ ಖಾಸಗಿ ಬಸ್ಸು, ಲಾರಿ, ಟೆಂಪೋಗಳನ್ನು ಅವಲಂಬಿಸುತ್ತಿದ್ದಾರೆ. ಇದರಿಂದ ಕೆಲವು ಯುವ ಕಾರ್ಮಿಕರು ಅತ್ಯಾಚಾರಕ್ಕೆ ಒಳಗಾದ ಘಟನೆಗಳೂ ಇವೆ.


ವಿಪರ್ಯಾಸವೆಂದರೆ ಕಾರ್ಮಿಕರಿಗೆ ತಮಗಾಗುತ್ತಿರುವ ಈ ತೊಂದರೆಗಳು, ತಮ್ಮ ಕೆಲಸದ ಒತ್ತಡದ ಕಾರಣದಿಂದ ಎಂದು ತಿಳಿಯುವುದೇ ಇಲ್ಲ.

ಕಳೆದ ಎರಡು ಮೂರು ವರ್ಷಗಳಲ್ಲಿ ಕಾರ್ಮಿಕರು ತೊಂದರೆಗೊಳಗಾದ ಘಟನೆಗಳನ್ನು ನೋಡಿದರೆ, ಮೇಲಿನ ತೊಂದರೆಗಳು ಎಷ್ಟು ತೀವ್ರವಾಗಿದೆ ಎಂದು ತಿಳಿಯುತ್ತದೆ.

1. ಕಲುಷಿತ ನೀರು ಕುಡಿದು 80 ಕಾರ್ಮಿಕರು ಆಸ್ಪತ್ರೆಗೆ ದಾಖಲಾಗಿರುವುದು (2004)
2. ಕಲುಷಿತ ನೀರು ಕುಡಿದು 20 ಮಂದಿ ಕಾರ್ಮಿಕರು ಅಸ್ವಸ್ಥರಾದುದು (2006)
3. ಕಲುಷಿತ ನೀರು ಕುಡಿದು 270 ಕಾರ್ಮಿಕರು ಅಸ್ವಸ್ಥರಾದುದು (2008)
4. ಉಸಿರಾಟದ ತೊಂದರೆಯಿಂದ ಹಲವಾರು ಕಾರ್ಮಿಕರು ಇ.ಎಸ್.ಐ.ಗೆ ದಾಖಲಾಗಿರುವುದು (2008)
5. ಪೌಷ್ಟಿಕ ಆಹಾರವಿಲ್ಲದೆ, ಒತ್ತಡದಿಂದ ಹಲವಾರು ಕಾರ್ಮಿಕರು ಟಿ.ಬಿ. ಕಾಯಿಲೆಗೆ ತುತ್ತಾಗಿರುವುದು. (2007–2008)
6. ಬಸ್‌ಚಾರ್ಜ್ ಹೆಚ್ಚು ಕೊಡಬೇಕೆಂದು ಲಾರಿಯಲ್ಲಿ ಹತ್ತಿ, ಮಹಿಳಾ ಕಾರ್ಮಿಕರೊಬ್ಬರು ಚಾಲಕನಿಂದ ಅತ್ಯಾಚಾರಕ್ಕೆ ಒಳಗಾಗಿದ್ದು, (2006)
7. ಮ್ಯಾನೇಜ್‌ಮೆಂಟ್‌ನವರು ನೀಡುವ ದೈಹಿಕ ದಂಡನೆ ಪರಿಣಾಮವಾಗಿ (Corporeal Punishment) (ಬೈಗುಳ, ಎಲ್ಲರ ಮುಂದೆ ನಿಲ್ಲಿಸುವುದು, ಅವಮಾನಿಸುವುದು) ಇದರ ಕಾರಣದಿಂದಾಗಿ ಅಮ್ಮು, ರೇಣುಕಾ, ಶಿಲ್ಪಾರ ಆತ್ಮಹತ್ಯೆಗಳು.
8. ಅತಿ ಕಟ್ಟುನಿಟ್ಟಿನ ಸಮಯಪಾಲನೆಯಿಂದ ಸಂಭವಿಸುತ್ತಿರುವ ಅಪಘಾತಗಳು – ಬಾಂಬೆ ರೆಯಾನ್ 3 ಅಪಘಾತ, ಕಾರ್ಮಿಕರ ದುರ್ಮರಣಗಳು (2006–2008)
9. ರಜೆಯ ನಿರಾಕರಿಸುತ್ತಿರುವುದರಿಂದ ಸಾವು ನೋವುಗಳು (2007)

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಎಲ್ಲ ರೀತಿಯ ಕಾರ್ಮಿಕ ಕಾನೂನುಗಳೂ ಇದ್ದರೂ ಸಹ ಯಾವ ಕಾರ್ಮಿಕ ಕಾನೂನುಗಳೂ ಜಾರಿಗೊಂಡಿಲ್ಲ. ಸಂಬಂಧ ಪಟ್ಟ ಸರ್ಕಾರೀ ಇಲಾಖೆಗಳು ಇದರ ಕಡೆ ಗಮನವನ್ನೇ ಹರಿಸುತ್ತಿಲ್ಲ. ಅಧಿಕಾರಿಗಳೇ ಕಾರ್ಖಾನೆಗಳ ಮಾಲೀಕರ ಪರವಾಗಿ ಮಾತನಾಡುತ್ತಾರೆ. ಕಾರ್ಮಿಕರಿಗೆ ಕೆಲಸ ದೊರೆತಿರುವುದೇ ದೊಡ್ಡದು ಎಂಬಂತೆ ವರ್ತಿಸುತ್ತಿದ್ದಾರೆ. ಕಾನೂನುಗಳು ಸರಿಯಾಗಿ ಪಾಲನೆಯಾಗುತ್ತಿಲ್ಲದ ಕಾರಣದಿಂದಲೇ ಕಾರ್ಮಿಕರು ಈ ರೀತಿ ಆರೋಗ್ಯ ಹಾಗೂ ಸುರಕ್ಷತೆಗೆ ಸಂಬಂಧ ಪಟ್ಟ ಹಲವಾರು ತೊಂದರೆಗೊಳಗಾಗುತ್ತಿದ್ದಾರೆ.

ಇಂದು ದೇಶಕ್ಕೆ ವಿದೇಶೀ ವಿನಿಮಯವನ್ನು ಗಣನೀಯ ಪ್ರಮಾಣದಲ್ಲಿ ತಂದುಕೊಡುತ್ತಿರುವ ಈ ಕಾರ್ಮಿಕರ ಆರೋಗ್ಯ ಹಾಗೂ ಸುರಕ್ಷತೆಯ ಬಗ್ಗೆ ಸರ್ಕಾರ, ಸಂಘ ಸಂಸ್ಥೆಗಳು ಹಾಗೂ ಮಾಲೀಕರು ವಿಶೇಷ ಗಮನ ಹರಿಸಬೇಕೆಂದು ಮುನ್ನಡೆ ಈ ಮೂಲಕ ಆಗ್ರಹಿಸುತ್ತಿದೆ. □



ದಿನಾಂಕ **14.3.2008** ರಂದು ಸಂಜೆ **7.45**ರ ಹೊತ್ತಿಗೆ, ಮೈಸೂರು ರಸ್ತೆಯ ಎಚ್.ಪಿ.ಎಫ್. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಆಂಜನಮ್ಮ ಹಾಗೂ ರೂಪಾ ಎಂಬ ಕಾರ್ಮಿಕರು ಓ.ಟಿ. ಮುಗಿಸಿಕೊಂಡು ಹೊರಗೆ ಬಂದಾಗ ಮುಂದೆಯೇ ಖಾಸಗಿ ಲಾರಿ ಹರಿದು ಅಪಘಾತಕ್ಕೊಳಗಾಗಿದ್ದಾರೆ. ಅಪಘಾತದಲ್ಲಿ ಆಂಜನಮ್ಮನವರು ಸ್ಥಳದಲ್ಲಿಯೇ ಮೃತಪಟ್ಟು, ರೂಪಾ ಎಂಬ ಕಾರ್ಮಿಕರು ತೀವ್ರ ಗಾಯಗೊಂಡು ಬೆಂಗಳೂರಿನ ಶೇಖರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಂಜನಮ್ಮನವರಿಗೆ ಶಾಲೆಯಲ್ಲಿ ಓದುತ್ತಿದ್ದ ಮಗನಿದ್ದು, ತಾಯಿಯ ಅನಿರೀಕ್ಷಿತ ಸಾವಿನಿಂದ ತಬ್ಬಲಿಯಾಗಿದ್ದಾನೆ.

ಆಂಜನಮ್ಮನವರ ಆತ್ಮಕ್ಕೆ ಶಾಂತಿ ದೊರಕಲೆಂದು ಮುನ್ನಡೆ ಈ ಮೂಲಕ ಶ್ರದ್ಧಾಂಜಲಿ ಅರ್ಪಿಸುತ್ತಾ, ಗಾಯಗೊಂಡಿರುವ ರೂಪಾ ಅವರು ಶೀಘ್ರವಾಗಿ ಗುಣವಾಗಲೆಂದು ಹಾರೈಸುತ್ತದೆ.



Scanned with OKEN Scanner



# ದಣಿವರಿಯದ ದಿಟ್ಟ ಹೋರಾಟಗಾರ್ತಿ ಸುಜಾ ರಾಧಾಕೃಷ್ಣ


***ಶಶಿಕಲಾ ಬೆಳಗಲಿ,*** ಕಾರ್ಯದರ್ಶಿ

ಭಾರತೀಯ ಕಮ್ಯುನಿಸ್ಟ ಪಕ್ಷ, ದಕ್ಷಿಣ ವಲಯ ಶಾಖೆ


**ಮೂ**ರು ದಶಕಗಳ ಹಿಂದಿನ ಸಂಗತಿ. ಆಗ ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಅಪರೂಪವಾಗಿತ್ತು. ಅದರಲ್ಲೂ ಎಡಪಂಥೀಯ ಪ್ರಗತಿಪರ ಸಂಘಟನೆಯನ್ನು ಕಟ್ಟಿಕೊಂಡು ಮಹಿಳೆಯೊಬ್ಬಳು ಹೋರಾಡುತ್ತಾಳೆಂದರೆ ಅಚ್ಚರಿ ಮೂಡಿಸುತ್ತಿತ್ತು. ಈಗಿನಂತೆಯೇ ಶೇ. 33ರ ಮೀಸಲಾತಿ ಮಾತು ಆಗ ಕೇಳಿಬರುತ್ತಿರಲಿಲ್ಲ. ಮನುಸ್ಮೃತಿಯ ದಾಸ್ಯದ ಸಂಕೋಲೆಗಳು ಬಿಗಿಯಾಗಿದ್ದವು. ಅಂಥ ಸನ್ನಿವೇಶದಲ್ಲಿ ಅವರೊಬ್ಬರಿದ್ದರು ಸುಜಾತಾ ರಾಧಾಕೃಷ್ಣ.

ಇತ್ತೀಚೆಗೆ ನಿಧನರಾದ ಕಮ್ಯುನಿಸ್ಟ್ ಪಕ್ಷದ ನಾಯಕಿ ಸುಜಾತಾ ರಾಧಾಕೃಷ್ಣ, ಹಾಸನ ಜಿಲ್ಲೆಯ ಅರಸೀಕೆರೆಯಂಥ ಪುಟ್ಟ ಊರಿನಲ್ಲಿ ಇದ್ದುಕೊಂಡು ಅಲ್ಲಿನ ಅಸಂಘಟಿತ ಕಾರ್ಮಿಕರನ್ನು ಸಂಘಟಿಸಿದರು. ಸಂಘಟನೆ ಎಂದರೆ ಹುಡುಗಾಟವಲ್ಲ. ಅರೆ ಮಲೆನಾಡಿನ ಈ ತಾಲ್ಲೂಕು ಕೇಂದ್ರದಲ್ಲಿ ಇದ್ದುಕೊಂಡು ಸಿನಿಮಾ ಕಾರ್ಮಿಕರ ಸಂಘಟನೆ ಮಾತ್ರವಲ್ಲದೆ, ಬೀಡಿ ಮತ್ತು ತೋಟಗಾರಿಕೆ ಕಾರ್ಮಿಕರನ್ನು ಸಹ ಸಂಘಟಿಸಿದರು. ಮನೆಗೆಲಸ ಮಾಡುವ ಮಹಿಳೆಯರನ್ನೂ ಸಹ ಸಂಘಟಿಸಿದ ಸುಜಾತಾ ಕೆಲ ಬಾರಿ ಜೈಲುವಾಸ ಅನುಭವಿಸಿದರು.

ಈ ಸಂಘಟನೆ ಹೋರಾಟದ ಫಲವಾಗಿ, ಅರಸೀಕೆರೆ ನಗರಸಭೆ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು ಬಂದ ಸುಜಾತಾ ಆನಂತರ ತಿರುಗಿ ನೋಡಲಿಲ್ಲ. ಬರೀ ಕಾರ್ಮಿಕರ ನಾಯಕಿಯಾಗಿ ಮಾತ್ರ ಉಳಿಯದೇ ಒಟ್ಟು ಜನಸಮುದಾಯದ ನಾಯಕಿಯಾಗಿ ಹೊರಹೊಮ್ಮಿದರು. ಅವರನ್ನು ಕಂಡರೆ ರಾಜಕೀಯ ಪುಢಾರಿಗಳು ನಡುಗುತ್ತಿದ್ದರು.

ಅರಸೀಕೆರೆ ತಾಲ್ಲೂಕಿನಲ್ಲಿ ದಲಿತರು, ಬಡವರು ಮತ್ತು ಮಹಿಳೆಯರು ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎಂದು ತಿಳಿದರೆ ಸಾಕು, ಸುಜಾತಾ ಅವರ ಬಳಿ ಹೋಗಿ ಧೈರ್ಯ ತುಂಬುತ್ತಿದ್ದರು. ಎಂಥದ್ದೇ ಪ್ರಸಂಗ ಬಂದರೂ ಎದೆಗುಂದದೆ, ಮಧ್ಯೆ ಪ್ರವೇಶಿಸಿ ನ್ಯಾಯ ಒದಗಿಸಲು ಸೆಣಸುತ್ತಿದ್ದ ಸುಜಾತಾ ಅಲ್ಲಿನ ಜನತೆಯ ಅಚ್ಚುಮೆಚ್ಚಿನ ನಾಯಕಿಯಾಗಿ ಬೆಳೆದರು.

ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ ಸುಜಾತಾ ರಾಧಾಕೃಷ್ಣ ಅವರು ಕೊನೆಯುಸಿರು ಇರುವವರೆಗೆ ಕ್ರಿಯಾಶೀಲರಾಗಿದ್ದರು. ಬೆಂಗಳೂರಿನಲ್ಲಿ ಇದ್ದುಕೊಂಡೇ ಅರಸೀಕೆರೆ ಕಾರ್ಮಿಕರ ಹೋರಾಟಗಳಿಗೆ ಅವರು ಮಾರ್ಗದರ್ಶನ ನೀಡುತ್ತಿದ್ದರು. ಸಾಯುವ ದಿನವೂ ಅರಸೀಕೆರೆ ಚಲನಚಿತ್ರ ಮಂದಿರದ ಕಾರ್ಮಿಕರ ಸಭೆಯನ್ನುದ್ದೇಶಿಸಿ ಮಾತನಾಡಬೇಕಿತ್ತು.

ಕಳೆದ ಹತ್ತು ವರ್ಷಗಳಿಂದ ತೀವ್ರ ಆಸ್ತಮಾದಿಂದ ಬಳಲುತ್ತಿದ್ದ ಸುಜಾತಾ ಅವರು ಅನಾರೋಗ್ಯದ ನಡುವೆಯೂ ಕಮ್ಯುನಿಸ್ಟ್ ಚಳುವಳಿಯಲ್ಲಿ ಆಸಕ್ತಿ ಹೊಂದಿದ್ದರು. ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ದಕ್ಷಿಣ ವಲಯ ಶಾಖೆಯನ್ನು ನಾವು ಆರಂಭಿಸಿದಾಗ, ಅವರು ಉತ್ಸಾಹದಿಂದ ಪಾಲ್ಗೊಂಡು ಮಾರ್ಗದರ್ಶನ ನೀಡಿದರು.

ಸುಜಾತಾ ರಾಧಾಕೃಷ್ಣ 25 ಫೆಬ್ರವರಿ 2008ರಂದು ನಮ್ಮನ್ನು ಅಗಲಿದ್ದಾರೆ. ಅವರ ತ್ಯಾಗ, ಪರಿಶ್ರಮ ಶ್ರಮಿಕ ಹೋರಾಟಕ್ಕೆ ನಿರಂತರ ಮಾರ್ಗದರ್ಶಿಯಾಗಿದ್ದಾರೆ. ❑

## ಕಾರ್ಮಿಕ ಗೆಳತಿಗೆ...

ಹೀಗೇ ಗೆಳತಿ ನಾವು ಹೆಜ್ಜೆ ಹಾಕಬೇಕು
ಶತಮಾನಗಳಿಂದ ಹರಿದಿರುವ
ಹೋರಾಟದ ರಕ್ತ ಸಾಗರದಲ್ಲಿ

ಹಿಂದಿನ ದಿನಗಳ ನೋವನು ನೆನೆದು
ಇಂದಿನ ಹೆಜ್ಜೆಯ ಹಿಂತೆಗೆಯಬಾರದು
ಹೋರಾಟವೆಂದರೆ ಹೀಗೇ ಗೆಳತಿ
ಬಗ್ಗಿದರೆ, ಕೂತರೆ ತಲೆ ಮುಳುಗೀತು
ಸೆಟೆದು ನಿಂತರೆ ಪಾದಮಟ್ಟ

ಇಂತಹ ಸಾಗರದಲ್ಲೇ ಗೆಳತಿ
ಬಂಡವಾಳಶಾಹಿ, ಅಧಿಕಾರಶಾಹಿ
ತಿಮಿಂಗಿಲ, ಮೊಸಳೆ,
ಶಾರ್ಕ್‌ಗಳು ಹಾಯಾಗಿರುವುದು
ಆದರೂ ಭಯಬೇಡ..
ನೆನೆಪಿರಲಿ ಜೊತೆಗೆ
ಇದೇ ಸಾಗರದಲ್ಲೇ
ಸುನಾಮಿಯೂ ಏಳಬಲ್ಲುದು
ಸುತ್ತಲಿನ ದೌರ್ಜನ್ಯದ ಹುಟ್ಟಡಗಿಸಬಲ್ಲದು

ಆಳಕ್ಕಿಳಿದಂತೆ ಗೆಳತಿ
ಉಸಿರುಗಟ್ಟುವುದು ಸಹಜ
ಆಗಲೂ ಹೋರಾಡಬೇಕು
ತಳದಲ್ಲಿ ಸಿಕ್ಕಾವು ಮುತ್ತು, ರತ್ನ, ಹವಳ!

– *ದೀಪಾ ಗಿರೀಶ್*

## ಹನಿಗಳು

ಸಂಘಟನೆ ಎಂಬುದೊಂದು ಜ್ಯೋತಿ
ಭಯ ಬೇಡ ಇದು ಅಲ್ಲ ಭ್ರಾಂತಿ
ಪಡೆಯಬೇಕಾದರೆ ಕಾರ್ಮಿಕರು ಶಾಂತಿ
ಕೆಂಪುವಸ್ತ್ರವ ಹಿಡಿದು ಮಾಡಬೇಕಿದೆ
ಕ್ರಾಂತಿ

ಫ್ಯಾಕ್ಟರಿ ಕಟ್ಟಡ
ಹೊಳೆವ ಕೆಂಡ
ಒಳಗಿನ ಕಾರ್ಮಿಕರ ಪಾಡು
ತೊಳೆದ ಕೆಂಡ

# ಕಾರ್ಮಿಕರನ್ನು ಜಾಗೃತಗೊಳಿಸಿದ ಕನಿಷ್ಠ ವೇತನ ಆಂದೋಲನ




*ಇಂದಿನ ಈ ಬೆಲೆ ಏರಿಕೆ ಬಿಸಿಯ ಜೀವನದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಕೇವಲ 93/- ರೂ. ಗಳ ಕನಿಷ್ಠ ವೇತದನದಲ್ಲಿ ಕಷ್ಟದಿಂದ ಜೀವನ ನಡೆಸುತ್ತಿದ್ದಾರೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಮುನ್ನಡೆ ಹಾಗೂ GATWU ಕಾರ್ಮಿಕರಿಗೆ ಕನಿಷ್ಠ 200/- ರೂಗಳಿಗೆ ಕನಿಷ್ಠ ವೇತನವನ್ನು ಹೆಚ್ಚಿಸಬೇಕೆಂದು ಸರ್ಕಾರವನ್ನು ಆಗ್ರಹಿಸಿ ಮೂರು ತಿಂಗಳ ಕಾಲ ಕನಿಷ್ಠ ವೇತನ ಆಂದೋಲನವನ್ನು ನಡೆಸಿತು. ಆಂದೋಲನದ ಉದ್ಘಾಟನೆಯಲ್ಲಿ ಅಧ್ಯಕ್ಷ ಅಶೀಮ್ ರಾಯ್, ಎಂಸಿ ನರಸಿಂಹನ್, ಮೈಕೇಲ್ ಫರ್ನಾಂಡಿಸ್ ಮುಂತಾದ ಹಿರಿಯ ಕಾರ್ಮಿಕ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.*

## *ಕನಿಷ್ಠ ವೇತನ ಆಂದೋಲನದ ಅಂಗವಾಗಿ ನಡೆದ ಸಾರ್ವಜನಿಕ ಸಭೆಗಳು*

ಕಾರ್ಮಿಕರ ಮನೆಮನೆಯನ್ನು ಸಂದರ್ಶಿಸಿದ ನಂತರ ಆಂದೋಲನದ ಮುಂದಿನ ಕಾರ್ಯಕ್ರಮವಾಗಿ, ಮೂರು ಏರಿಯಾಗಳಲ್ಲಿ ಸಾರ್ವಜನಿಕರ ಗಮನ ಸೆಳೆಯಲು ಹಾಗೂ ಕಾರ್ಮಿಕರ ಗಮನ ಸೆಳೆಯಲು ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲಾಗಿತ್ತು.

**ನಾಯಂಡಹಳ್ಳಿ – ಅರಳಿಮರ ಸರ್ಕಲ್**

ದಿನಾಂಕ 30.11.2007ರಂದು ಇಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಸುಮಾರು 20ರಿಂದ 25 ಮಂದಿ ಭಾಗವಹಿಸಿದ್ದರು. ಯೂನಿಯನ್‌ನ ಕಾರ್ಯದರ್ಶಿ ರುಕ್ಮಿಣಿ ಹಾಗೂ ಮುನ್ನಡೆಯ ಕಾರ್ಯದರ್ಶಿ ಸರೋಜಾ ಹಾಗೂ ಖಜಾಂಚಿ ಲಲಿತಾರವರು ಸಭೆಯನ್ನು ಉದ್ದೇಶಿಸಿ, ಕನಿಷ್ಠ ವೇತನ ಆಂದೋಲನವನ್ನು ಕುರಿತು ಮಾತನಾಡಿದರು.

ನಂತರ ನಾಯಂಡಹಳ್ಳಿಯ ಪ್ರತಿ ರಸ್ತೆಗಳಲ್ಲಿ ಆಟೋದಲ್ಲಿ ತೆರಳಿ ಕನಿಷ್ಠ ವೇತನದ ಬಗ್ಗೆ ಮೈಕ್‌ನಲ್ಲಿ ಅನೌನ್ಸ್ ಮಾಡಲಾಯಿತು. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದ್ದು, ಪ್ರತಿ ಮನೆಯ ಮುಂದೆ ಕಾರ್ಮಿಕರು ಹಾಗೂ ಇತರ ಸಾರ್ವಜನಿಕರು ಹೊರಗೆ ಬಂದು ಕರಪತ್ರಗಳನ್ನು ತೆಗೆದುಕೊಳ್ಳುತ್ತಿದ್ದರು.

**ಹೆಗ್ಗನಹಳ್ಳಿ – ಸರ್ಕಾರೀ ಪ್ರಾಥಮಿಕ ಶಾಲೆಯ ಆವರಣ**

ದಿನಾಂಕ 23.12.2007ರಂದು ಆಯೋಜಿಸಲಾಗಿದ್ದ ಇಲ್ಲಿನ ಸಾರ್ವಜನಿಕ ಸಭೆಯಲ್ಲಿ ಸುಮಾರು 50 ಮಂದಿ ಭಾಗವಹಿಸಿದ್ದು, ಬೆಳಗ್ಗೆ 8.30ರಿಂದಲೇ ಆಟೋದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಹೆಚ್ಚಾಗಿರುವ ಬೀದಿಗಳಲ್ಲಿ ಅನೌನ್ಸ್ ಮಾಡುತ್ತಾ, ಸಭೆಯಲ್ಲಿ ಭಾಗವಹಿಸುವಂತೆ ಕೋರಲಾಗಿತ್ತು.

### ಕಾರ್ಮಿಕರಿಂದ ಬಂದ ವಿವಿಧ ಪ್ರತಿಕ್ರಿಯೆಗಳು

*"ಈಗ್ಲೇ ಇಷ್ಟು ಪ್ರೊಡಕ್ಷನ್ ಕೇಳಿ ನಮ್ಮ ಪ್ರಾಣ ಹಿಂಡ್ತಾರೆ, ಇನ್ನು 200 ರೂಪಾಯಿನೂ ಕೊಟ್ರೆ ಅಷ್ಟೇ ನಾವು ಬದುಕಿರೋ ಹಾಗೇ ಇಲ್ಲ" -* ಪೀಣ್ಯ
*"ಇದು ಬಹಳ ಒಳ್ಳೇದು, ಹೌದು ನಮಗೆ 2500 ಯಾವುದಕ್ಕೂ ಸಾಲ್ತಿಲ್ಲ, ನಾವೆಲ್ಲ ನಿಮ್ಮ ಜೊತೆ ಇರ್ತೀವಿ"*- ಹೆಗ್ಗನಹಳ್ಳಿ
*"200 ರೂಪಾಯಿನಾ!? ಅಷ್ಟೇ ಫ್ಯಾಕ್ಟರಿ ಬಾಗಿಲು ಮುಚ್ಕೊಂಡು ಹೋಗ್ತಾರೆ"*–
*"ಯಾವಾಗಿಂದ ಕೊಡಿಸ್ತೀರಾ?"* – ಮೈಸೂರು ರಸ್ತೆ,
*"ಹೌದು ಬೇರೆಯವರಿಗೆ ಎಷ್ಟೊಂದು ಸಂಬಳ ಸಿಗುತ್ತೆ, ಈ ಯೋಚನೆ ನಮಗೆ ಬಂದೇ ಇಲ್ಲ, ಇದು ತುಂಬಾ ಒಳ್ಳೇದು"*
*"ಓ.. ಈಗ್ಲೇ ಫ್ಯಾಕ್ಟರಿ ಲಾಸು ಲಾಸು ಅಂತಾರೆ! ನಮ್ಗೆ ದಿನಕ್ಕೆ 200 ನಿಜಕ್ಕೂ ಕೊಡ್ತಾರಾ? ಕೊಟ್ರೆ ಒಳ್ಳೇದು"*

11.30ಕ್ಕೆ ಪ್ರಾರಂಭವಾದ ಸಭೆಯಲ್ಲಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ನ ಉಪಾಧ್ಯಕ್ಷರಾದ ಜಯರಾಮ್, ಕಾರ್ಯದರ್ಶಿಯಾದ ರುಕ್ಮಿಣಿ, ಮುನ್ನಡೆಯ ಅಧ್ಯಕ್ಷರಾದ ರತ್ನಮ್ಮ, ಹಾಗೂ ಸಿವಿಡೆಪ್ ಸಂಸ್ಥೆಯ ಪ್ರತಿಭಾರವರು ಕನಿಷ್ಠ ವೇತನದ ಬಗ್ಗೆ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅಲ್ಲಿಯೇ ಭಾಗವಹಿಸಿದ್ದ ಸಾರ್ವಜನಿಕರೊಬ್ಬರು ಕರಪತ್ರವನ್ನು ಓದಿ ಪ್ರಭಾವಿತರಾಗಿ ಕನಿಷ್ಠ ವೇತನ ಆಂದೋಲನದ ಉದ್ದೇಶವನ್ನು ಕುರಿತು ಮಾತನಾಡಿದರು.



**ಕಸ್ತೂರಬಾ ನಗರ– ಅರಳಿಮರ**

ದಿನಾಂಕ 6.1.2008ರಂದು ಬೆಳಗ್ಗೆ 8.30ಕ್ಕೆ ಕಸ್ತೂರಬಾನಗರದ ಪ್ರತಿ ರಸ್ತೆಗಳಿಗೂ ಹೋಗಿ ಕರಪತ್ರ ಹಂಚಿ ಆಟೋದಲ್ಲಿ ಘೋಷಣೆಗಳನ್ನು ಕೂಗುತ್ತಾ ಸಾರ್ವಜನಿಕರ ಗಮನ ಸೆಳೆದು, ಕಾರ್ಮಿಕರನ್ನು ಸಭೆಗೆ ಆಹ್ವಾನಿಸಲಾಗಿತ್ತು.

ಬೆಳಗ್ಗೆ 11.00 ಗಂಟೆಗೆ ಆರಂಭವಾದ ಸಭೆಯಲ್ಲಿ ಸುಮಾರು 75 ಮಂದಿ ಭಾಗವಹಿಸಿದ್ದರು. ಸಿವಿಡೆಪ್ ಕಾರ್ಯಕರ್ತರಾದ ಸರಸ್ವತಿಯವರು ನಿರೂಪಣೆ ಮಾಡಿದರು. ಯೂನಿಯನ್‌ನ ಉಪಾಧ್ಯಕ್ಷ ಜಯರಾಮ್, ರುಕ್ಮಿಣಿ, ಮುನ್ನಡೆಯಿಂದ ರತ್ನಮ್ಮ, ಭಾಗ್ಯಮ್ಮ, ಸರೋಜಾ, ಯಮುನಾ ಸಭೆಯನ್ನು ಉದ್ದೇಶಿಸಿ ಮಾತನಾಡಿ ಈ ಕನಿಷ್ಠ ವೇತನ ಆಂದೋಲನದ ಉದ್ದೇಶವನ್ನು ವಿವರಿಸಿ, ಕಾರ್ಮಿಕರನ್ನು ಸದಸ್ಯರಾಗುವಂತೆ ಕೇಳಿದರು.

ಒಟ್ಟಾರೆಯಾಗಿ ಹೇಳುವುದಾದರೆ, ಇಂದಿನ ಬಂಡವಾಳಶಾಹಿಗಳ ನಿರಂತರ ಒತ್ತಡದ ನಡುವೆಯೂ ಸತತ ಮೂರು ತಿಂಗಳ ಕಾಲ ಕಾರ್ಮಿಕ ಮುಖಂಡರ ನೇತೃತ್ವದಲ್ಲಿ ಕಾರ್ಮಿಕರೆಲ್ಲ ಭಾಗವಹಿಸಿ, ನಡೆಸಿದ ಕನಿಷ್ಠ ವೇತನ ಆಂದೋಲನವು ಕಾರ್ಮಿಕರನ್ನು ತಲುಪಿ, ಅವರನ್ನು ಜಾಗೃತಗೊಳಿಸುವಲ್ಲಿ ಸಫಲವಾಯಿತು. ❑



Scanned with OKEN Scanner

# ಮಾರ್ಚ್ 8, ಅಂತಾರಾಷ್ಟ್ರೀಯ ದುಡಿವ ಮಹಿಳಾ ದಿನ

ಭದ್ರತೆ ಇರುವುದು ಬಂಧನದಲ್ಲಲ್ಲ!
ತನ್ನತನದ ಸಮರ್ಥನೆಯಲ್ಲಿ.

ಎನ್ನುತ್ತಾ, ತನ್ನ ವ್ಯಕ್ತಿತ್ವದ ಸ್ವಂತ ಗುರುತಿನ ಛಾಪು ಮೂಡಿಸುವ ದಿಟ್ಟ ಸ್ವಾಭಿಮಾನಿ ಮಹಿಳೆಯರನ್ನು ನೆನಪಿಸಿಕೊಳ್ಳುವ ದಿನ ಮತ್ತೊಮ್ಮೆ ಬಂದಿದೆ. ಮಾರ್ಚ್ 8, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ; ದುಡಿಮೆಯ ಹಕ್ಕು, ರಾಜಕೀಯ ಹಕ್ಕು, ಸುರಕ್ಷಿತ ಕೆಲಸ, ಸಮಾನ ವೇತನ ಮುಂತಾದ ಬೇಡಿಕೆಗಳನ್ನಿಟ್ಟುಕೊಂಡು ದುಡಿಯುವ ಮಹಿಳೆಯರು ಹೋರಾಟ ಆರಂಭಿಸಿದ ದಿನ. ಜಗತ್ತಿನ ಯಾವ ಯಾವುದೇ ಮೂಲೆಗಳಲ್ಲಿ ಅಂತಹುದೇ ಬೇಡಿಕೆಗಳೊಂದಿಗೆ ಬೇರೆ ಸನ್ನಿವೇಶದಲ್ಲಿ ಈಗಲೂ ಹೋರಾಟ ಮುಂದುವರೆಸುತ್ತಿರುವ ಮಹಿಳೆಯರನ್ನು ಒಂದುಗೂಡಿಸುತ್ತಿದೆ. ಆದ್ದರಿಂದ ಮತ್ತೊಂದು ಮಹಿಳಾ ದಿನದ ಹಿನ್ನೆಲೆಯಲ್ಲಿ ಇಂದಿನ ಸಮಾಜದಲ್ಲಿ ಮಹಿಳಾ ಹೋರಾಟಗಳು ನಡೆಯಬೇಕಾಗಿರುವ ಪರಿಸ್ಥಿತಿಯನ್ನು ಇನ್ನೊಮ್ಮೆ ಚರ್ಚಿಸಬೇಕು.

ನಮ್ಮ ದೇಶದಲ್ಲಿ ಹಾಗೂ ರಾಜ್ಯದಲ್ಲೂ ಕೂಡ ಕಳೆದ 3-4 ದಶಕಗಳಲ್ಲಿ ಸತತವಾಗಿ ನಡೆದಿರುವ ಮಹಿಳಾ ಪರ ಚಟುವಟಿಕೆಗಳು ಒಂದು ಮಟ್ಟದ ಸಂವೇದನಾಶೀಲತೆಯನ್ನು ಉಂಟುಮಾಡಿರುವುದು ನಿಜ. ಆದರೆ ಅದೇ ಸಂದರ್ಭದಲ್ಲಿ ಹೋರಾಟಗಳಿಂದ ದೊರೆತ ಕಾನೂನುಗಳ ಹೊರತಾಗಿಯೂ ಮಹಿಳೆಯರ ಮೇಲಿನ ಹಿಂಸೆ ಹತ್ತು ಹಲವು ರೀತಿಗಳಲ್ಲಿ ಮುಂದುವರೆದಿದೆ. ಮನೆಯೊಳಗೆ ಹಿಂಸೆ ಹೊಸ ರೂಪಗಳನ್ನು ಪಡೆದುಕೊಳ್ಳುತ್ತಿದೆ. ಈಗಲೂ ದೇಶಾದ್ಯಂತ ಗಂಟೆಗೆ 40 ವರದಕ್ಷಿಣೆ ಹಿಂಸೆ ಪ್ರಕರಣಗಳು ದಾಖಲಾಗುತ್ತವೆ. ಮನೆಯ ಹೊರಗೆ ದುಡಿಯಲು ಹೋಗುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಾದಂತೆ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ಪ್ರಕರಣಗಳು ದೊಡ್ಡ ಮಟ್ಟದಲ್ಲಿ ಬೆಳಕಿಗೆ ಬರುತ್ತಿವೆ. ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರಗಳು, ಅದರಲ್ಲೂ ಅಪ್ರಾಪ್ತ ಬಾಲಕಿಯರ ಮೇಲಿನ ಅತ್ಯಾಚಾರಗಳು ಆಘಾತಕಾರಿಯಾಗಿ ಹೆಚ್ಚಿವೆ. ಆಸಿಡ್ ದಾಳಿಯಂತಹ ಭೀಕರ ಹಿಂಸೆಯ ರೂಪಗಳನ್ನು ಹೆಚ್ಚು ಹೆಚ್ಚಾಗಿ ಬಳಸಲಾಗುತ್ತಿದೆ. ಇವೆಲ್ಲವೂ, ಇನ್ನೂ ಪಿತೃಪ್ರಧಾನ ಮನಸ್ಥಿತಿಯಲ್ಲಿ ಬರಬೇಕಿರುವ ಅಗಾಧವಾದ ಪರಿವರ್ತನೆಯನ್ನು ಸೂಚಿಸುತ್ತವೆ.

ಹಳ್ಳಿಗಳ ದಲಿತ, ಆದಿವಾಸಿ ಮಹಿಳೆಯರ ಪರಿಸ್ಥಿತಿ ಹಿಂದಿಗಿಂತಲೂ ಶೋಚನೀಯವಾಗಿದೆ. ದಲಿತ ಸಮುದಾಯದ ವಿಚಿತ್ರ ಪ್ರಜ್ಞೆಯ ಮೇಲಿನ ದ್ವೇಷವನ್ನು ಇಂದಿಗೂ ಮೇಲ್ಜಾತಿಗಳ ಬಲಾಢ್ಯರು ದಲಿತ ಮಹಿಳೆಯರ ಮೇಲೆ ನಿರಾತಂಕವಾಗಿ ತೀರಿಸಿಕೊಳ್ಳುತ್ತಲೇ ಇದ್ದಾರೆ. ಹಿಂದೆಂದೂ ಇಲ್ಲದ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿರುವ ಗ್ರಾಮೀಣ ಭಾರತದ ಮಹಿಳೆಯರು, ಹೆಣ್ಣುಮಕ್ಕಳ ಸಾಗಾಣಿಕೆಯಂತಹ ವಿಷವೃತ್ತಗಳಿಗೆ ಸುಲಭದ ಬಲಿಪಶುಗಳಾಗಿದ್ದಾರೆ. ಇಂತಹ ಜಾಲಗಳು, ದೊಡ್ಡ ಸಂಖ್ಯೆಯಲ್ಲಿ ಅಸಹಾಯಕ, ಬಡ ಹೆಣ್ಣುಮಕ್ಕಳನ್ನು ರಾಜಾರೋಷವಾಗಿ ಪೋಷಕರಿಂದಲೇ ಕೊಂಡು, 'ರಫ್ತು' ಮಾಡುವ ಮಟ್ಟಕ್ಕೆ ಬೆಳೆದಿವೆ. ಒಂದೆಡೆ ಹೆಚ್ಚುತ್ತಿರುವ ಬಡತನ, ಮತ್ತೊಂದೆಡೆ



ರೇಷನ್ ಆಹಾರವನ್ನು ಕಡಿತಗೊಳಿಸುತ್ತಿರುವ ಸರ್ಕಾರ, ಮಹಿಳೆಯರ ಆರೋಗ್ಯಕ್ಕೆ ದೊಡ್ಡ ಪೆಟ್ಟು ನೀಡಿವೆ. ಪ್ರತಿ ವರ್ಷ ಭಾರತದಲ್ಲಿ 1 ಲಕ್ಷದ 36 ಸಾವಿರ ಮಹಿಳೆಯರು ಅಪೌಷ್ಟಿಕತೆಯಿಂದ ಹೆರಿಗೆಯಲ್ಲಿ ಸಾವನ್ನಪ್ಪುತ್ತಿದ್ದಾರೆ!

ಈ ಜಾಗತೀಕರಣ ಯುಗದ ಕೈಗಾರಿಕಾ ಕಾರ್ಮಿಕರಾಗಿಯೂ ಮಹಿಳೆಯರು ದುಡಿಯುತ್ತಿದ್ದಾರೆ. ಅತ್ಯಂತ ಅಸುರಕ್ಷಿತ ವಾತಾವರಣದಲ್ಲಿ, ನಾನಾ ಬಗೆಯ ಕಿರುಕುಳಗಳಿಗೆ ಇವರು ಗುರಿಯಾಗಿದ್ದಾರೆ. ಬಹಳಷ್ಟು ಸಲ ಈ ಮಹಿಳೆಯರು ಅಸಂಘಟಿತ ಕಾರ್ಮಿಕರಾಗಿಯೋ ಅಥವಾ ಗುತ್ತಿಗೆ ಕಾರ್ಮಿಕರಾಗಿಯೋ ಅಭದ್ರತೆಯಲ್ಲಿಯೇ ಕೆಲಸ ಮಾಡಬೇಕಾಗಿದೆ.

ಇವೆಲ್ಲವುಗಳೊಂದಿಗೆ ನಮ್ಮ ಸಮಾಜದಲ್ಲಿ ಉಂಟಾಗುತ್ತಿರುವ ರಾಜಕೀಯ, ಆರ್ಥಿಕ ಏರುಪೇರುಗಳೂ ಮಹಿಳೆಯರ ಒಟ್ಟಾರೆ ಸ್ಥಿತಿಗತಿಯ ಮೇಲೆ ಪರಿಣಾಮ ಬೀರುತ್ತಿವೆ. ಸೌಂದರ್ಯವರ್ಧಕಗಳ ತಯಾರಿಕೆ ಅಪಾರ ಲಾಭ ತರುವ ಉದ್ದಿಮೆಯಾದಂತೆ, ಅದಕ್ಕಾಗಿ ಮಹಿಳೆಯರ ಸರಕೀಕರಣವೂ ಜೋರಾಗಿ ನಡೆಯುತ್ತಿದೆ. ಜಾಹೀರಾತುಗಳು, ಟಿ.ವಿ.-ಸಿನಿಮಾಗಳು, ಫ್ಯಾಷನ್ ಪರೇಡುಗಳಲ್ಲಿ ಮಹಿಳೆ ಕೇವಲ ನಗ್ನ-ಅರೆನಗ್ನ ದೇಹದ ಮಟ್ಟಕ್ಕೆ ಇಳಿಸಲ್ಪಟ್ಟಿದ್ದಾಳೆ. ಹೀಗೆ ಸರಕಾಗಿ, ಸರಕನ್ನು ಮಾರುವ ವಾಹಕವಾಗಿ, ಕೊನೆಗೆ ಅವನ್ನೆಲ್ಲ ಕೊಳ್ಳುವ-ಬಳಸುವ ಗ್ರಾಹಕಳೂ ಆಗಿ ಮಹಿಳೆ ಗ್ರಾಹಕ ಸಂಸ್ಕೃತಿಗೆ ಬಲಿಯಾಗಿದ್ದಾಳೆ. ಇವೆಲ್ಲದರ ಪರಿಣಾಮ, ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸೆಯ ರೂಪದಲ್ಲೂ ಕಾಣುತ್ತಿದೆ.

ಹೀಗಾಗಿ ಈ ಎಲ್ಲ ಸವಾಲುಗಳೆದುರು ಇಂದಿನ ಮಹಿಳೆಯರು ತಮ್ಮ ಅಂತಃಸತ್ವವನ್ನು ಸಾಬೀತುಪಡಿಸಬೇಕಾಗಿದೆ. ಇಂತಹ ಒತ್ತಡಗಳನ್ನೂ, ನೇರವಾದ ಹಾಗೂ ಪರೋಕ್ಷವಾದ ಹಿಂಸೆಯನ್ನೂ ಎದುರಿಸಿ, ಮೀರಬಲ್ಲ ಸಾಮರ್ಥ್ಯವನ್ನು ಮತ್ತೊಮ್ಮೆ ಒರೆಗೆ ಹಚ್ಚಬೇಕಾಗಿದೆ. ಆಧುನಿಕತೆ ಒದಗಿಸಿರುವ ಎಲ್ಲಾ ಅವಕಾಶಗಳನ್ನೂ ನಮ್ಮ ಸಶಕ್ತೀಕರಣಕ್ಕೆ ಬಳಸಿಕೊಳ್ಳುತ್ತಾ, ನಮ್ಮೆದುರಿನ ಅಡೆತಡೆಗಳನ್ನು ದಾಟುತ್ತ ಮುನ್ನಡೆಯಬೇಕಾಗಿದೆ.

ಇಂದಿಗೆ ನೂರು ವರ್ಷಗಳ ಹಿಂದೆ, 1908ರ ಮಾರ್ಚ್ 8ರಂದು ಅಮೇರಿಕಾದಲ್ಲಿ ಕಾರ್ಮಿಕ ಮಹಿಳೆಯರು ಲಕ್ಷಾಂತರ ಸಂಖ್ಯೆಯಲ್ಲಿ ಒಗ್ಗೂಡಿ ಆರಂಭಿಸಿದ ಮಹಿಳಾ ವಿಮೋಚನೆಯ ನಡಿಗೆ, ಈ ಶತಮಾನದುದ್ದಕ್ಕೂ ಸಾಗಿ ಇಲ್ಲಿಗೆ ಮುಟ್ಟಿದೆ; ಈ ಹಾದಿಯಲ್ಲಿ ಪಡೆದ ಯಶಸ್ಸುಗಳು ಮರುಕಳಿಸುವಂತೆ, ಕೊರತೆಗಳನ್ನು ಸರಿದೂಗಿಸುವಂತೆ, ವಿಮರ್ಶಾತ್ಮಕ ಹಿನ್ನೋಟದೊಂದಿಗೆ ಮುಂದಿನ ಹಾದಿಯನ್ನು ಕಂಡುಕೊಳ್ಳಬೇಕು.

*ಈಗ ನಮ್ಮ ಮಡಿಲುಗಳಲ್ಲಿ*
*ಮನಸ್ಸುಗಳಲ್ಲಿ*
*ಹೂವರಳುವ ಕಾಲ ಬಂದಿದೆ*

(ಕಿಶ್ವರ್ ನಹೀದ್‌ರ ಕವನದ ಸಾಲುಗಳು) ಎಂದು ಘೋಷಿಸಬೇಕು.

*(ಕೃಪೆ : ಸಮಾನತಾ ಮಹಿಳಾ ವೇದಿಕೆ)*



Scanned with OKEN Scanner




# ಆತ್ಮಹತ್ಯೆ: ಅದೊಂದೇ ದಾರಿಯಲ್ಲ

ರೇಣುಕಾ 19 ವರ್ಷದ, ಇನ್ನೂ ಜೀವನಾನುಭವ ಸಾಕಷ್ಟಿಲ್ಲದ ಮುಗ್ಧ ಯುವತಿ. ತಂದೆ ತಾಯಿಗೆ ಒಬ್ಬಳೇ ಮಗಳು. ಸಂಸಾರದ ಅನಿವಾರ್ಯತೆಗೆ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಳು. ಕಾರ್ಖಾನೆಯಲ್ಲಿ ಅವಳು ಸಣ್ಣ ತಪ್ಪು(?) ಮಾಡಿದಳೆಂದು ಸೂಪರ್‌ವೈಸರ್ ಹಾಗೂ ಪ್ರೊಡಕ್ಷನ್ ಮ್ಯಾನೇಜರ್ ಇಬ್ಬರೂ ಅವಮಾನಿಸಿದಾಗ ರೇಣುಕಾಳಿಗೆ ಬೇರೆ ದಾರಿಯೇ ಕಾಣದೆ ಮನೆಗೆ ಬಂದು ಅಂದೇ ನೇಣಿಗೆ ಶರಣಾದಳು.

ಅಮ್ಮು 3 ಹಾಗೂ 6 ವರ್ಷದ ಎರಡು ಪುಟ್ಟಪುಟ್ಟ ಮಕ್ಕಳ ತಾಯಿ. ಗಂಡನಿಂದ ಸಂಪಾದನೆಯಿಲ್ಲ. ಅವಳೇ ಸಂಸಾರ ಸಾಕಬೇಕು. ಕಾರ್ಖಾನೆಯಲ್ಲಿ ಸೂಪರ್ ವೈಸರ್ ಕೆಟ್ಟದಾಗಿ ಆಡಿದ ಮಾತಿಗೆ ಮನನೊಂದು ಕಾರ್ಖಾನೆಯ ಶೌಚಾಲಯದಲ್ಲಿ ನೇಣು ಹಾಕಿಕೊಂಡಳು.

ಸ್ನೇಹಿತರೇ, ಈ ಘಟನೆಗಳನ್ನು ಕೇಳಿದರೆ ಮನಸ್ಸು ಭಾರವಾಗುತ್ತಿದೆ ಅಲ್ಲವೇ? ರೇಣುಕಾ ತಾನು ಮಾಡದ ತಪ್ಪಿಗೆ ಆತ್ಮಹತ್ಯೆಯೇ ಅಂತಿಮ ದಾರಿ ಎಂದು ಏಕೆ ನಿರ್ಧರಿಸಿದಳು? ಅಮ್ಮು ತನ್ನ ಪುಟ್ಟ ಮಕ್ಕಳ ಚಿಂತೆ ಮಾಡಲಿಲ್ಲವೇ? ಎಂಬ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಏಳುತ್ತವೆ. ಇವರೊಂದಿಗೇ ಇತ್ತೀಚಿನ ದಿನಗಳಲ್ಲಿ "ಗಾರ್ಮೆಂಟ್ಸ್ ಕಾರ್ಮಿಕರು ನೇಣಿಗೆ ಶರಣು", "ಗಾರ್ಮೆಂಟ್ಸ್ ಕಾರ್ಮಿಕರ ಸಾವು" ಎಂಬ ಸುದ್ದಿಗಳು ಪತ್ರಿಕೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ.

ಏಕೆ ಹೀಗಾಗುತ್ತಿದೆ?

ಕಾರ್ಮಿಕರ ಮೇಲೆ ಹೆಚ್ಚುತ್ತಿರುವ ಒತ್ತಡದಿಂದ ಇದು ಹೆಚ್ಚಾಗುತ್ತಿದೆಯೇ? ಗಾರ್ಮೆಂಟ್ಸ್ ಉದ್ಯಮ ಇಂದು ಐದರಿಂದ ಆರು ಲಕ್ಷದ ವರೆಗೂ ಕಾರ್ಮಿಕರಿಗೆ ಕೆಲಸ ನೀಡಿದೆ. ಇದರಲ್ಲಿ ಹೆಚ್ಚಿನ ಮಂದಿ ಮಹಿಳೆಯರು ಎಂದು ನಮಗೆಲ್ಲರಿಗೂ ತಿಳಿದಿದೆ. ಈ ಮಹಿಳೆಯರು ಹೆಚ್ಚಾಗಿ ಹಳ್ಳಿಗಳಿಂದ ಬಂದು ಬೆಂಗಳೂರಿನಂತಹ ಮಹಾನಗರದಲ್ಲಿ ದುಡಿದು ಜೀವಿಸುತ್ತಿದ್ದಾರೆ.

ಅಮ್ಮು ಅಥವಾ ರೇಣುಕಾಳ ಪರಿಸ್ಥಿತಿಯನ್ನು ಗಮನಿಸಿದರೆ ಕಾರ್ಖಾನೆಯಲ್ಲಿ ಮಹಿಳಾ ಕಾರ್ಮಿಕರು ಎಷ್ಟು ಕೆಲಸದ ಒತ್ತಡವನ್ನು ಅನುಭವಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಜೀವನ ನಿರ್ವಹಣೆಗೆ ಈ ಉದ್ಯೋಗವನ್ನೇ ಅವಲಂಬಿಸಿ, ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುವ ಈ ಮಹಿಳೆಯರು ಸ್ವಾಭಾವಿಕವಾಗಿಯೇ ಮಾನಸಿಕ ಒತ್ತಡದಲ್ಲಿರುತ್ತಾರೆ. ಆದರೆ ಕಾರ್ಖಾನೆಗಳಲ್ಲಿ, ಅವೈಜ್ಞಾನಿಕ ಪದ್ಧತಿಯ ಪ್ರೊಡಕ್ಷನ್ ಟಾರ್ಗೆಟ್, ಪುರುಷ ಸೂಪರ್‌ವೈಸರ್‌ಗಳ ಕೆಟ್ಟ ಬೈಗುಳ, ಅಪಮಾನ ಎಲ್ಲವೂ ಅವಳಲ್ಲಿ ಮತ್ತಷ್ಟು ಒತ್ತಡ ತುಂಬುತ್ತವೆ.

ಕಾರ್ಖಾನೆಯಲ್ಲಿ ಸರಿಯಾದ ಕಾರ್ಮಿಕ ಕಾನೂನುಗಳನ್ನು ಪಾಲಿಸದಿರುವುದು, ಹೆಚ್ಚಿನ ಹೊತ್ತು ದುಡಿಸಿಕೊಳ್ಳುವುದು, ಎಲ್ಲರ ಮುಂದೆ ಕಾರ್ಮಿಕರಿಗೆ ಅವಮಾನ ಮಾಡುವುದು, ಇವೆಲ್ಲವೂ ಕಾನೂನು ಬಾಹಿರ. ಕಾರ್ಖಾನೆಗಳು ತಮ್ಮ ಕಾರ್ಮಿಕರನ್ನು ನಡೆಸಿಕೊಳ್ಳುವ ರೀತಿಯನ್ನು ಬದಲಿಸ [illegible]. ಈ ರೀತಿಯ ಘಟನೆಗಳು ಕಾರ್ಖಾನೆಯಲ್ಲಿ [illegible] ಎಲ್ಲಿ [illegible] ರೀತಿಯಲ್ಲಿ [illegible] ತಮ್ಮ [illegible] ಇಂತಹ ಘಟನೆಗಳು ತೆರೆಯ ಮರೆಯಲ್ಲಿಯೇ ಉಳಿದು ಬಿಡುತ್ತವೆ. ತಮ್ಮ ಕಾರ್ಖಾನೆಯ ಕಾರ್ಮಿಕರೊಬ್ಬರು ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ತೆಗೆದುಕೊಂಡರೆಂದರೆ, ಕಾರ್ಖಾನೆಯ ಮಾಲೀಕರು ಕನಿಷ್ಠ ಮಾನವೀಯ ನೆಲೆಯಲ್ಲಿಯಾದರೂ ಅವರ ಹೊಣೆಯ ಪಾಲನ್ನು ಹೊತ್ತುಕೊಂಡು, ಘಟನೆಗೆ ತಮ್ಮ ಕಾರಣ ಕಂಡುಬಂದರೆ ಅದಕ್ಕೆ ತಕ್ಕ ಪರಿಹಾರ ನೀಡಿ ಮುಂದೆ ಆ ರೀತಿ ನಡೆಯದಂತೆ ನೋಡಿಕೊಳ್ಳಬೇಕಾಗಿದೆ.

ಕಾರ್ಮಿಕ ಇಲಾಖೆಯೂ ಸಹ ತನ್ನ ಕಾರ್ಯಕ್ಷೇತ್ರವನ್ನು ಮತ್ತಷ್ಟು ಚುರುಕುಗೊಳಿಸಬೇಕಿದೆ. ಜೀವನೋಪಾಯಕ್ಕಾಗಿ ದುಡಿಯಲು ಬಂದು ಅಲ್ಲಿಯೇ ಜೀವನವನ್ನು ಅಂತ್ಯಗೊಳಿಸಿಕೊಳ್ಳಬೇಕೆಂದರೆ ಆ ಕಾರ್ಮಿಕರಿಗೆ ಇರುವ ಸಮಸ್ಯೆಯನ್ನು ಹಾಗೂ ಅದರ ಹಿನ್ನೆಲೆಯನ್ನು ಕಾರ್ಮಿಕ ಇಲಾಖೆಗಳು, ಮಹಿಳಾ ಸಂಘಟನೆಗಳು ಹಾಗೂ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.



ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಈ ರೀತಿಯ ಆತ್ಮಹತ್ಯೆಗೆ ಯತ್ನಿಸುವವರು ಹೆಚ್ಚಿನ ಮಂದಿ 18ರಿಂದ 25ರ ಒಳಗಿನ ಹೆಣ್ಣುಮಕ್ಕಳು. ಈ ಕಾರ್ಖಾನೆಯನ್ನೂ ಈ ಕೆಲಸವನ್ನೂ ಮೀರಿದ ಬದುಕು ಗುರಿಯೊಂದು ನಮಗೆ ಇದೆ. ಅದನ್ನು ನಾವು ಸಾಧಿಸಬೇಕೆಂದು ಈ ಯುವತಿಯರಿಗೆ ತಿಳಿಸಬೇಕಾಗಿದೆ. ಕೆಲಸದಲ್ಲಿ ಆಗುವ ಸಣ್ಣ ತಪ್ಪಿಗೆ ಆತ್ಮಹತ್ಯೆಯೇ ಪರಿಹಾರ ಎಂದುಕೊಂಡರೆ ಆಗುತ್ತದೆಯೇ? ಮುಗ್ಧ ಯುವತಿಯರು ತಿಳಿಯದೆ ಈ ರೀತಿ ಮಾಡಿಕೊಳ್ಳುತ್ತಿದ್ದಾರೆ. ದಯವಿಟ್ಟು ಈ ಪರಿಹಾರ ಮಾರ್ಗ ಅನುಸರಿಸಬೇಡಿ. ನಮಗಾಗಿ ಕಾನೂನಿದೆ ಅದನ್ನು ಬಳಸೋಣ. ಸಂಘಟನೆಯಿದೆ ಅದನ್ನು ಕಟ್ಟೋಣ. ನೀವು ತಿಳಿಯಿರಿ. ನಿಮ್ಮ ಗೆಳತಿಯರಿಗೂ ತಿಳಿಸಿ.

ಏನೇ ಸಮಸ್ಯೆಯಾದರೂ ಯಾವ ಕಾರ್ಮಿಕರೂ ಸಹ ಆತ್ಮಹತ್ಯೆಯಂತಹ ಅಂತಿಮ ನಿರ್ಧಾರಕ್ಕೆ ಬರಬಾರದು ಬದಲಿಗೆ ಸಮಾಜಮುಖಿಯಾಗಿ ಸಂಘ ಜೀವನದ ಕಡೆಗೆ ಮನಸ್ಸು ಹರಿಸಬೇಕೆಂದು ಮುನ್ನಡೆ ಬಯಸುತ್ತಿದೆ. □

## ಕಲುಷಿತ ನೀರು ಸೇವಿಸಿ ಗಾರ್ಮೆಂಟ್ಸ್ ಕಾರ್ಮಿಕರು ಅಸ್ವಸ್ಥ

ದಿನಾಂಕ 25.02.2008ರಂದು ತುಮಕೂರು ರಸ್ತೆಯ ಎಂಟೇ ಅಪಾರೆಲ್ಸ್ ಕಾರ್ಖಾನೆಯ ಸುಮಾರು 250 ಮಂದಿ ಕಾರ್ಮಿಕರು ಕಾರ್ಖಾನೆಯಲ್ಲಿ ಸಂಗ್ರಹಿಸಿ ಇಡಲಾಗಿದ್ದ ಕಲುಷಿತ ನೀರು ಸೇವಿಸಿ ಅಸ್ವಸ್ಥರಾಗಿದ್ದಾರೆ.

ಕಾರ್ಖಾನೆಯು ಸುಮಾರು 3 ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದು, ಸುಮಾರು 2700 ಮಂದಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ದಿನಾಂಕ 25.02.2008, ಸೋಮವಾರದಂದು, ಸುಮಾರು 11.30ರ ಹೊತ್ತಿಗೆ ಕಾರ್ಮಿಕರಿಗೆ ಹೊಟ್ಟೆನೋವು, ತಲೆಸುತ್ತು ಹಾಗೂ ವಾಂತಿ ಬೇಧಿ ಪ್ರಾರಂಭವಾಗಿದ್ದು, ತಕ್ಷಣ ಆಡಳಿತ ವರ್ಗದವರು ಎಲ್ಲರನ್ನು ರಾಜಾಜಿನಗರದ ಇ.ಎಸ್.ಐ ಆಸ್ಪತ್ರೆಗೆ ದಾಖಲಿಸಿದ್ದಾರೆ. ಸಂಜೆ 4ರ ವೇಳೆಗೆ ಹಾಸಿಗೆಗಳ ಅಭಾವದಿಂದ ಉಳಿದ ಅಸ್ವಸ್ಥ ಕಾರ್ಮಿಕರನ್ನು ಇಂದಿರಾನಗರ ಇ.ಎಸ್.ಐ ಹಾಗೂ ಮಾಗಡಿ ರಸ್ತೆಯ ಸರ್ವೋದಯ ಆಸ್ಪತ್ರೆಗಳಿಗೆ ದಾಖಲು ಮಾಡಲಾಯಿತು. ಸರ್ವೋದಯ ಆಸ್ಪತ್ರೆಯಲ್ಲಿ ಧನಲಕ್ಷ್ಮಿ ಎಂಬ ಕಾರ್ಮಿಕರನ್ನು ತುರ್ತು ನಿಗಾ ಘಟಕದಲ್ಲಿ ಇರಿಸಿದ್ದು, ಅವರ ಪರಿಸ್ಥಿತಿ ಗಂಭೀರವಾಗಿದೆ.

ಘಟನೆಯ ಎರಡು ದಿನಗಳ ಹಿಂದೆಯೇ ಹಲವು ಕಾರ್ಮಿಕರಿಗೆ ಆರೋಗ್ಯ ಸಮಸ್ಯೆ ಕಂಡು ಬಂದಿದ್ದು, ಎಲ್ಲರೂ ತಮಗೊಬ್ಬರಿಗೇ ಹೀಗಾಗುತ್ತಿದೆ ಎಂದು ತಿಳಿದು ಸುಮ್ಮನಿದ್ದರು. ಹಲವು ಕಾರ್ಮಿಕರು ಈ ಬಗ್ಗೆ ಸೂಪರ್‌ವೈಸರ್‌ಗೆ ದೂರು ನೀಡಿದ್ದರೂ ಯಾವುದೇ ಗಮನ ಹರಿಸಿಲ್ಲ.

ಕಂಪನಿಯು ಯಾವುದೇ ಕಾರ್ಮಿಕ ಕಾನೂನುಗಳನ್ನೂ ಪಾಲಿಸುತ್ತಿಲ್ಲ. ಕಾರ್ಮಿಕರಿಗೂ ಇದರ ಬಗ್ಗೆ ಯಾವುದೇ ಅರಿವಿಲ್ಲದ ಕಾರಣ, ಈ ಘಟನೆ ಜರುಗಿದೆ ಎಂದು ಮೇಲ್ನೋಟಕ್ಕೇ ಸಾಬೀತಾಗಿದೆ. ಕಾರ್ಖಾನೆಯಲ್ಲಿ ಸುಮಾರು 3000 ಕಾರ್ಮಿಕರು ಕೆಲಸ ಮಾಡುತ್ತಿದ್ದರೂ ವೈದ್ಯರ ಸೌಲಭ್ಯವಿಲ್ಲ. ಆಂಬ್ಯುಲೆನ್ಸ್ ಇಲ್ಲ. 2004ರಲ್ಲಿ ಉತ್ತರಹಳ್ಳಿಯ ಗೋಯಾಂಕಾ ಅಪ್ಪಾರೆಲ್ಸ್ ಕಾರ್ಖಾನೆಯಲ್ಲಿ ಇದೇ ರೀತಿಯ ಘಟನೆ ಸಂಭವಿಸಿ, 80 ಕಾರ್ಮಿಕರು ಅಸ್ವಸ್ಥರಾಗಿ, ಒಬ್ಬ ಯುವತಿ ಮೃತಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು.

ಘಟನೆಗೆ ಆಡಳಿತ ಮಂಡಳಿ ಕಾರ್ಮಿಕರ ಬಗೆಗೆ ತಳೆದಿರುವ ನಿರ್ಲಕ್ಷ್ಯ ಧೋರಣೆಯೇ ಕಾರಣ, ಇದಕ್ಕೇ ಅವರೇ ನೇರ ಹೊಣೆಗಾರರು. ಕಾರ್ಮಿಕರ ಆರೋಗ್ಯವನ್ನು ತೀವ್ರವಾಗಿ ಕಡೆಗಣಿಸಿದುದರ ಪರಿಣಾಮವಾಗಿ ಈ ಘಟನೆ ನಡೆದಿದೆ. ಇದನ್ನು ಮುನ್ನಡೆ ಖಂಡಿಸುತ್ತಾ ತೊಂದರೆಗೊಳಗಾದ ಕಾರ್ಮಿಕರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಈ ಮೂಲಕ ಆಗ್ರಹಿಸುತ್ತಿದೆ.

## ನಾಯಂಡ ಹಳ್ಳಿಯಲ್ಲಿ ಮುನ್ನಡೆ ಕೇಂದ್ರ

ಕಾರ್ಮಿಕ ಬಂಧುಗಳಿಗೊಂದು ಸಿಹಿ ಸುದ್ದಿ. ಮುನ್ನಡೆ ಈಗ ನಿಮ್ಮ ನಾಯಂಡಹಳ್ಳಿಯಲ್ಲಿ ಕೇಂದ್ರವೊಂದನ್ನು ತೆರೆದಿದೆ. ದಿನಾಂಕ 02.03.2008ರಂದು ಕ್ರೈಸ್ ಮುಖಂಡರಾದ



ಸುನಂದಾ ಜಯರಾಮ್. ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್‌ನ ಪ್ರಧಾನ ಕಾರ್ಯದರ್ಶಿ ರುಕ್ಮಿಣಿ, ಮುನ್ನಡೆಯ ರತ್ನಮ್ಮ, ಸರೋಜ, ಲಲಿತಾ, ಯಮುನಾ, ಸಿವಿಡಿಪಿನ ಪ್ರತಿಭಾ ಮುಂತಾದವರಿಂದ ವಿಧ್ಯುಕ್ತವಾಗಿ ಮುನ್ನಡೆ ಕೇಂದ್ರ ಉದ್ಘಾಟನೆಯಾಗಿದೆ. ಇನ್ನು ಮುಂದೆ ಕಾರ್ಮಿಕರು ಸ್ಥಳೀಯ ಮಟ್ಟದಲ್ಲಿ ನೆರವು ಪಡೆದುಕೊಳ್ಳಲು, ಕಾನೂನು ತಿಳಿದುಕೊಳ್ಳಲು, ದೂರು ನೀಡಲು ಮುನ್ನಡೆಯನ್ನು ಈ ವಿಳಾಸದಲ್ಲಿ ಸಂಪರ್ಕಿಸಬಹುದು.

*ದೂರವಾಣಿ:*

**ಯಶೋಧಾ : 94495 06451, ರತ್ನಮ್ಮ : 9739200749**

**ಸರೋಜ : 94804 36358**

*ಕಛೇರಿ ಸಮಯ*

**ಬೆಳಗ್ಗೆ 10.30ರಿಂದ ಸಂಜೆ 7.00ಗಂಟೆಯ ವರೆಗೆ.**

## ಆರೋಗ್ಯ ಭಾಗ್ಯ

### ಅಕ್ಕಿ

ಶಮನ: ಗುಳ್ಳೆ, ಅರ್ಧ ತಲೆನೋವು

ಅಕ್ಕಿ ತೊಳೆದ ನೀರಿನಿಂದ ಬೆವರು ಗುಳ್ಳೆಗಳ ಭಾಗವನ್ನು ತೊಳೆಯುತ್ತಿದ್ದರೆ ಗುಳ್ಳೆಗಳು ಮಾಯವಾಗುವುವು. ಕೆಂಪಕ್ಕಿಯ ತರಿಯ ಅನ್ನಕ್ಕೆ ಮೊಸರು ಹಾಕಿಕೊಂಡು ಬೆಳಗ್ಗೆ ಸೇವಿಸಿದರೆ ಅರ್ಧ ತಲೆನೋವು ಶಮನವಾಗುವುದು.

### ಕರಿಬೇವು

ಶಮನ: ಮಧುಮೇಹ(ಶುಗರ್)

ಕರಿಬೇವಿನ ಸೊಪ್ಪನ್ನು ಹಸಿಯಾಗಿ ತಿನ್ನುವುದರಿಂದ ಮಧುಮೇಹ ಹತೋಟಿಗೆ ಬರುವುದು. ಕರಿಬೇವಿನ ಸೊಪ್ಪಿನ ಚಟ್ನಿ ತೂಕ ಇಳಿಸಿಕೊಳ್ಳುವುದಕ್ಕೂ ಸಹಾಯ ಮಾಡುತ್ತದೆ. ಹಾಗೂ ತಲೆಗೂದಲು ಕಪ್ಪಗಿರುತ್ತದೆ.

### ಅರಿಶಿನ ಪುಡಿ

ಶಮನ: ಸುಟ್ಟಗಾಯ

ಸುಟ್ಟಗಾಯಕ್ಕೆ ತಕ್ಷಣ ಅರಿಶಿನ ಪುಡಿ ಹಾಕುವುದರಿಂದ ಗಾಯ ವಾಸಿಯಾಗುವುದು.

### ಸಾಸಿವೆ

ಶಮನ: ಮೊಡವೆ

ಕಾದ ಕೊಬ್ಬರಿ ಎಣ್ಣೆಯಲ್ಲಿ ಒಂದು ಹಿಡಿ ಬಿಳಿ ಸಾಸಿವೆಯನ್ನು ಹಾಕಿ ಸಿಡಿಸಿ ನಂತರ ಕೆಳಗೆ ಇಳಿಸಿ ಆರಿದ ನಂತರ ಎಣ್ಣೆಯನ್ನು ಸೋಸಿ ರಾತ್ರಿ ಮಲಗುವ ಮುನ್ನ ಮುಖಕ್ಕೆ ಹಚ್ಚಿಕೊಂಡರೆ ಮೊಡವೆಗಳು ಶಮನವಾಗುವುದು.

### ಮೆಂತ್ಯೆ

ಶಮನ: ಆಮಶಂಕೆ

ಮೆಂತ್ಯೆಯನ್ನು ಹುರಿದು ಕುಟ್ಟಿ ಪುಡಿಮಾಡಿ ಒಂದು ಟೀ ಚಮಚದಷ್ಟು ಪುಡಿಯನ್ನು ಒಂದು ಬಟ್ಟಲು ಮಜ್ಜಿಗೆಯಲ್ಲಿ ಬೆರೆಸಿ ದಿನಕ್ಕೆ ಎರಡು ಬಾರಿ ಸೇವಿಸಿದರೆ ಆಮಶಂಕೆ ಶಮನವಾಗುವುದು.

### ಮಾವು

ಶಮನ : ಅತಿಸಾರ

ಮಾವಿನಕಾಯಿಯ ಸಿಪ್ಪೆಯನ್ನು ಚೆನ್ನಾಗಿ ಅರೆದು ಮಜ್ಜಿಗೆಯಲ್ಲಿ ಕದಡಿ ದಿನಕ್ಕೆ ಎರಡು ಬಾರಿ ಸೇವಿಸಿದರೆ ಅತಿಸಾರ ಮತ್ತು ಆಮಶಂಕೆ ಶಮನವಾಗುವುದು.



Scanned with OKEN Scanner

# ಶುಭಾಶಯಗಳು



ಮಲ್ಲಿಕಾ
ಹುಟ್ಟಿದ ದಿನಾಂಕ: 13-02-1994
ತಾಯಿ : ರತ್ನಮ್ಮ
ಕಾರ್ಖಾನೆ : ಗಾರ್ಟೆಕ್ಸ್



ಅನುಷಾ
ಹುಟ್ಟಿದ ದಿನಾಂಕ: 05-01-2001
ತಾಯಿ : ಕಲ್ಪನಾ
ಕಾರ್ಖಾನೆ : ಹೆಚ್.ಪಿ.ಎಫ್.



ರವಿರಾಜ್
ಹುಟ್ಟಿದ ದಿನಾಂಕ: 22-02-1992
ತಾಯಿ : ವರಲಕ್ಷ್ಮೀ
ಕಾರ್ಖಾನೆ : ದೇವಿಕ ಡಿಸೈನ್ಸ್



ಮಮತ
ಹುಟ್ಟಿದ ದಿನಾಂಕ: 10-02-1990
ಕಾರ್ಖಾನೆ : ಅರವಿಂದ್ ಮಿಲ್ಸ್



ಪೃಥ್ವಿರಾಜ್
ಹುಟ್ಟಿದ ದಿನಾಂಕ: 09-02-2000
ತಾಯಿ: ಸುಧಾ
ಕಾರ್ಖಾನೆ : ಛಾಯ ಗಾರ್ಮೆಂಟ್ಸ್



ಲಕ್ಷ್ಮಿ ಡಿ.
ಹುಟ್ಟಿದ ದಿನಾಂಕ: 19-03-1991
ತಾಯಿಯ ಹೆಸರು : ಪದ್ಮ
ಕಾರ್ಖಾನೆಯ ಹೆಸರು : ನಮಸ್ತೆ ಗಾರ್ಮೆಂಟ್ಸ್



ಶೈಲಜಾ ದಂಪತಿಗಳು
ವಿವಾಹ ವಾರ್ಷಿಕೋತ್ಸವ
ಕಾರ್ಖಾನೆ: ವಿ.ಕೆ.ಎನ್.

ಕಾರ್ಮಿಕ ಮಿತ್ರರೇ,

ಸೂಜಿದಾರ ನಿಮ್ಮದೇ. ಇಲ್ಲಿ ಬರೆಯುವ ವಿಷಯ ನಿಮ್ಮವೆ. ಇದನ್ನು ಇನ್ನೂ ಚೆಂದಗೊಳಿಸಲು ತಮ್ಮಿಂದ ಸಲಹೆ, ಸೂಚನೆ ಸುದ್ದಿಗಳನ್ನು ನಮಗೆ ತಲುಪಿಸಿ. ತಮ್ಮಿಂದ ಪ್ರತಿಕ್ರಿಯೆಗಳನ್ನು ನಾವು ಸದಾ ನಿರೀಕ್ಷಿಸುತ್ತಿದ್ದೇವೆ.

ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ತಮ್ಮ ಅನಿಸಿಕೆಗಳನ್ನು ಕಳುಹಿಸಬೇಕಾಗಿ ವಿನಂತಿ.

*ಸಂಪಾದಕ ಮಂಡಳಿ*

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

ಸಿವಿಡೆಪ್ ಇಂಡಿಯಾ
ನಂ.8/3, ಶ್ರೀಮಾತಾ ನಿಲಯ
ನ್ಯೂಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು-29
ದೂ.: 26751320,

ಶನಿವಾರ ಸಂಜೆ 5-30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10-30ರ ನಂತರ

ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)
   ನಂ. 27, 5ನೇ ಮುಖ್ಯರಸ್ತೆ
   6ನೇ ಅಡ್ಡರಸ್ತೆ, ಸಂಪಂಗಿರಾಮನಗರ
   ಬೆಂಗಳೂರು – 560 027.
2. ಕರ್ನಾಟಕ ಮಹಿಳಾ ಆಯೋಗ
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ, ಬೆಂಗಳೂರು-560009
   ದೂ.: 22216485
3. ವನಿತಾ ಸಹಾಯವಾಣಿ
   ಪೊಲೀಸ್ ಕಮಿಷನರ್, ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225
4. ವಿಮೋಚನಾ
   ನಂ, 33/1-9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು-38
   ದೂ.: 25492781 / 25492782
5. ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ
   ನ್ಯಾಯ ದೇಗುಲ
   ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು-27

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ. : 2675 1320
ಪ್ರಕಾಶಕರು : ಸಿವಿಡೆಪ್-ಇಂಡಿಯಾ. ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159